ಕರ್ನಾಟಕ ವಿಧಾನಸಭೆ

KARNATAKA LEGLISLATIVE ASSEMBLY

೩ ನೇ ಮಾರ್ಚ್ ೧೯೯೩ ಸಾಯನ ಸೌರಪಾಲ್ಗುಣ ೧೯೧೪ (ಶಕ)
3 rd March 1993 Sayana Sowrapalguna 1914 (S.E.)

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೦ : ೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್.ಕೌಜಲಗಿ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ವಿಷಯ : ಬಳ್ಳಾರಿ ಜಿಲ್ಲೆಯಲ್ಲಿ ಅನುದಾನಿತ ಹಾಗೂ ಅನುದಾನ ರಹಿತ ಮತ್ತು ಮಾನ್ಯತೆ ಇಲ್ಲದ ಶಾಲೆಗಳು.

122

ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ 1988 ರಿಂದ 1992ರವರೆಗೆ ಇರುವ ಅನುದಾನಿತ ಹಾಗೂ ಅನುದಾನ ರಹಿತವಾಗಿ ಮಾನ್ಯತೆ ಪಡೆದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳೆಷ್ಟು ? ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ವಿವರಗಳನ್ನು ನೀಡುವುದು (ಆಂಗ್ಲ ಮಾಧ್ಯಮ) ?

ಆ) ಬಳ್ಳಾರಿ ಜಿಲ್ಲೆಯಲ್ಲಿ ಅನಧಿಕೃತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು? ಅಂತಹ ಶಾಲೆಗಳನ್ನು ಮುಚ್ಚಲು ಸರ್ಕಾರ ಕೈಗೊಂಡ ಕ್ರಮವೇನು? (ಆಂಗ್ಲ ಮಾಧ್ಯಮ)

ಇ) ಸರ್ಕಾರದ ಮಾನ್ಯತೆ ಪಡೆದಿರುವ ಖಾಸಗಿ ಅನುದಾನ ರಹಿತ ಶಾಲೆಗಳ ಶಿಕ್ಷಕರ ಸಂಖ್ಯೆ ಎಷ್ಟು? ಅಂತಹ ಶಾಲೆಗಳಲ್ಲಿ ನೀಡುತ್ತಿರುವ ಕನಿಷ್ಠ ಹಾಗೂ ಗರಿಷ್ಠ ವೇತನವೆಷ್ಟು?(ಆಂಗ್ಲ ಮಾಧ್ಯಮ)

ಈ) ಇಂತಹ ಶಾಲೆಗಳ ಆಡಳಿತ ಮಂಡಳಿಗಳು ಈ ಶಾಲೆಗಳನ್ನು ಪ್ರಾರಂಭಿಸಲು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಅನುದಾನ ಸಂಹಿತೆ ನಿಯಮಗಳ ಪ್ರಕಾರ ಅಗತ್ಯ ಪೂರೈಕೆಗಳನ್ನು ಒದಗಿಸಿರುತ್ತವೆಯೇ ? (ಆಂಗ್ಲ ಮಾಧ್ಯಮ)

ಉ) ನ್ಯಾಯಾಲಯದ ಆದೇಶದ ಪ್ರಕಾರ ನಡೆಸುತ್ತಿರುವ ಖಾಸಗಿ ಅನುದಾನರಹಿತ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳೆಷ್ಟು ? ಅಥವಾ ನ್ಯಾಯಾಲಯದಲ್ಲಿ ಇಂತಹ ಶಾಲೆಗಳ ಎಷ್ಟು ಪ್ರಕರಣಗಳು ಬಾಕಿ ಇರುತ್ತವೆ?

ಡಾ ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

	ಪ್ರಾಥಮಿಕ	ಪ್ರೌಢ
ಅನುದಾನಿತ	ಇಲ್ಲ	ಇಲ್ಲ
ಅನುದಾನ ರಹಿತ	ಇಲ್ಲ	05

ವರ್ಷ	ವಿದ್ಯಾರ್ಥಿಗಳ ಸಂಖ್ಯೆ	ಶಿಕ್ಷಕರು
1988-89	297	ಈ ಎಲ್ಲಾ 5 ಶಾಲೆಗಳಲ್ಲಿ
1989-90	519	ಪ್ರೌಢ ಶಾಲಾ ಅನುದಾನ
1990-91	872	ಸಂಹಿತೆ ನಿಯಮಗಳ ಪ್ರಕಾರ
1991-92	915	ಒಟ್ಟು 40 ಶಿಕ್ಷಕರನ್ನು
1992-93	933	ನೇಮಿಸಲಾಗಿದೆ.

ಆ)

ಪ್ರಾಥಮಿಕ	ಪ್ರೌಢ
19	ಇಲ್ಲ

1992 ರ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮದನ್ವಯ ಕ್ರಮ ಜರುಗಿಸಲಾಗುವುದು.

ಇ) 40 ಶಿಕ್ಷಕರು. ಆ ಶಿಕ್ಷಕರಿಗೆ ನಿಯಮಗಳ ಪ್ರಕಾರ ವೇತನವನ್ನು ನೀಡಲಾಗುತ್ತಿದೆ. ಅಂತಹ ಶಿಕ್ಷಕರಿಗೆ ಕಡಿಮೆ ವೇತನ ನೀಡುತ್ತಿರುವ ಬಗ್ಗೆ ಇಲಾಖೆಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ಈ) ಮಾನ್ಯತೆ ಪಡೆದ ಪ್ರೌಢಶಾಲೆಗಳು ಪ್ರೌಢ ಶಾಲೆಗಳ ಅನುದಾನ ಸಂಹಿತೆ ನಿಯಮಗಳ ಕನಿಷ್ಠ ಅಗತ್ಯತೆಗಳನ್ನು ಪೂರೈಸಿರುತ್ತವೆ.

ಉ)

ಪ್ರಾಥಮಿಕ	ಪ್ರೌಢ
ಇಲ್ಲ	ಇಲ್ಲ

ಶ್ರೀ ಕೆ. ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯಲ್ಲಿ ಅನ್ ರೆಕಗ್‌ನೈಜ್ಡ್ ಪ್ರೈಮರಿ ಸ್ಕೂಲ್ಸ್ ಮತ್ತು ಹೈಸ್ಕೂಲ್ಸ್ ಒಟ್ಟು 19 ಎಂದು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಓದತಕ್ಕಂಥ ಹುಡುಗರ ಪರಿಸ್ಥಿತಿ ಏನು ? ಆ ಸ್ಕೂಲ್ಸ್‌ನ್ನು ರೆಕಗ್‌ನೈಜ್ಡ್ ಮಾಡುತ್ತಿರಾ? ಅಥವಾ ಮಾಡುವುದಿಲ್ಲವೇ? ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹೊಸ ಸ್ಕೂಲ್ಸ್ ಕೊಡಬಾರದು ಎಂದು ಹೇಳಿದ್ದೀರಿ. ಆ ರೀತಿಯಲ್ಲಿ ಆದರೆ ಆ ಹುಡುಗರ ಗತಿ ಏನು? ಅವರ ಮುಂದಿನ ಜೀವನ ಹಾಳು ಮಾಡುತ್ತೀರಾ? ಇದರ ಬಗ್ಗೆ ಹೇಳಿ.

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ , ಮೇ ತಿಂಗಳಲ್ಲಿ ಒಂದು ಆರ್ಡಿನೆನ್ಸ್ ಬಂತು. ಅದು ಮುಂದೆ ಆಕ್ಟ್ ಕೂಡ ಆಯಿತು. ಅನ್‌ಆಥರೈಸ್ಡ್ ಆಗಿ ಶಾಲೆಗಳನ್ನು ಪ್ರಾರಂಭ ಮಾಡಬಾರದು, ಅಂಥ ಶಾಲೆಗಳಲ್ಲಿ ಪ್ರವೇಶಾವಕಾಶ ಪಡೆಯಬಾರದು, ಪ್ರವೇಶ ಅವಕಾಶ ತೆಗೆದುಕೊಳ್ಳಬಾರದು ಎಂದು ಕಾನೂನು ಇದೆ. ಕಾನೂನು ಇದ್ದರೂ ಸಹ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ಸೇರಿರತಕ್ಕ ವಿದ್ಯಾರ್ಥಿಗಳ ಬಗ್ಗೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ತೆಗೆದುಕೊಳ್ಳುತ್ತೇವೆ. ಬಂದ್ ಮಾಡಲಿಕ್ಕೆ ಕಾನೂನು ಪ್ರಕಾರ ಈ ಒಂದು ಕಾರ್ಯಮಾಡಿದ್ದೇವೆ. ಬಹಳಷ್ಟು ಜನ ವಿದ್ಯಾರ್ಥಿಗಳು ಈಗ ಅಲ್ಲಿ ಸೇರಿಕೊಂಡಿದ್ದಾರೆ. ವಿದ್ಯಾರ್ಥಿಗಳ ಒಂದು ಪರಿಸ್ಥಿತಿಯನ್ನು ನೋಡಿ ಆ ವಿದ್ಯಾರ್ಥಿಗಳಿಗೆ ಕೊನೆಯ ಪಕ್ಷ ಪರೀಕ್ಷೆಗೆ ಕೂಡುವುದಕ್ಕೆ ವ್ಯವಸ್ಥೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅನೇಕ ಇಂಗ್ಲಿಷ್ ಮಾಡಿಯಂ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಹೈಸ್ಕೂಲ್‌ಗಳಲ್ಲಿ ಇಂಥ ವಿದ್ಯಾರ್ಥಿಗಳಿದ್ದಾರೆ. ಈ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಪರೀಕ್ಷೆಗೆ ಕೂಡುವಂಥ ವ್ಯವಸ್ಥೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಅನ್ ಆಥರೈಸ್ಡ್ ಸ್ಕೂಲ್‌ಗಳನ್ನು ಬಂದ್ ಮಾಡಬೇಕೆಂದು ಮೇಲಿಂದ ಮೇಲೆ ಎಚ್ಚರಿಕೆ ಕೊಡುತ್ತಾ ಬಂದಿದ್ದೇವೆ. ನಮ್ಮ ಅಧಿಕಾರಿಗಳೂ ಸಹ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೆ, ಅವರನ್ನು ಪರೀಕ್ಷೆಗೆ ಕೂಡಿಸುವುದೇನೋ ಸರಿ. ಎಜುಕೇಷನ್ ಕಂಟಿನ್ಯೂ ಮಾಡತಕ್ಕಂಥಾದ್ದಕ್ಕೆ ಏನು ಮಾಡುತ್ತಾರೆ? ಬೇರೆ ಸ್ಕೂಲ್‌ಗಳಲ್ಲಿ ಇಂಥಾ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಡುತ್ತಾರೆಯೇ? ಅಥವಾ ಈ ಶಾಲೆಗಳನ್ನು ರೆಕಗ್‌ನೈಸ್ ಮಾಡುತ್ತೀರಾ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಕಾನೂನು ಪ್ರಕಾರವಿದ್ದರೆ ರೆಕಗ್‌ನಿಷನ್ ಕೊಡುವುದರ ಬಗ್ಗೆ ಪರಿಶೀಲಿಸಲಾಗುತ್ತದೆ. ನಿಯಮಗಳ ವಿರುದ್ಧವಿದ್ದರೆ ಅವುಗಳನ್ನು ಬಂದ್ ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇನ್ನು ವಿದ್ಯಾರ್ಥಿಗಳ ಬಗ್ಗೆ ಕೇಳಿದರು, ವಿದ್ಯಾರ್ಥಿಗಳಿಗೆ ಬೇರೆ ಬೇಕಾದಷ್ಟು ಶಾಲೆಗಳಿವೆ. ಇಂಗ್ಲೀಷ್ ಮಾಡಿಯಂ ಶಾಲೆಗಳಿಗೆ ತನ್ನದೇ ಆದಂಥ ನಿಯಮ ಇದೆ. ಆ ನಿಯಮಾವಳಿ ಪ್ರಕಾರ ಅವು ಇದ್ದರೆ ಅವುಗಳನ್ನು ಇಡುತ್ತೇವೆ. ಇಲ್ಲವೆಂದರೆ ಅವುಗಳನ್ನು ಬಂದ್ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೊಸದಾಗಿ ಶಾಲೆ ತೆಗೆಯಲಿಕ್ಕೆ ಅವಕಾಶ ಇಲ್ಲದ ಹಾಗೆ ಕಾನೂನು ಮಾಡಿದ್ದೇವೆಂದು ಹೇಳಿದ್ದಾರೆ. ಇವರು ಏನು ಕಾನೂನು ಮಾಡಿದ್ದಾರೆ, ಇದು ರೆಟ್ರಾಸ್ಪೆಕ್ಟೀವ್ ಆಗಿಲ್ಲ, ಪ್ರಾಸ್ಪೆಕ್ಟೀವ್ ಆಗಿದೆ. ಈ ಹಿಂದೆ, ನೀವು ಅನುಮತಿ ಕೊಡುತ್ತೀರಿ ಎನ್ನತಕ್ಕಂಥ ಭಾವನೆಯಿಂದ ಒಂದೊಂದು ಜಿಲ್ಲೆಯಲ್ಲಿ ಸುಮಾರು 20-30 ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದ್ದಾರೆ. ಅವುಗಳಲ್ಲಿ ಬಹಳಷ್ಟು 6

ಶಾಲೆಗಳು ಎಸ್‌ಸಿ/ಎಸ್‌ಟಿ ಜನಾಂಗದವರಿಗೆ ಸೇರಿವೆ. ಅವರಿಗೂ ಇದೇ ರೀತಿ ಏನಾದರೂ ಮಾಡುವುದಾದರೆ ಬಹಳ ತೊಂದರೆಯಾಗುತ್ತದೆ. ಈಗಾಗಲೇ ಶಾಲೆಗಳಿಗೆ ಮೇಸ್ಟ್ರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. 30-40-50 ಸಾವಿರ ರೂಪಾಯಿಗಳ ಡೊನೇಷನ್ ತಗೆದುಕೊಂಡು ಮೇಸ್ಟ್ರುಗಳನ್ನು ಅಪಾಯಿಂಟ್ ಮಾಡಿದ್ದಾರೆ. ಅವರ ಗತಿ ಏನು? ಹಿಂದೆ ಆಗಿರತಕ್ಕಂಥ ಶಾಲೆಗಳು ನಿಮ್ಮ ಕಾನೂನಿಗೆ ಒಳಪಟ್ಟಿವೆ ಮತ್ತು ಅರ್ಹತೆಗಳು ಇವೆಯೆಂದು ಕಂಡು ಬಂದಲ್ಲಿ ಅವುಗಳಿಗೆ ಮಾನ್ಯತೆ ಕೊಡುವುದು ಉತ್ತಮವೆಂದು ನನ್ನ ಸಲಹೆ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೆ, ಮೇ ತಿಂಗಳಿನಲ್ಲಿ ಇದರ ಬಗ್ಗೆ ಸುಗ್ರೀವಾಜ್ಞೆ ಆಗಿದ್ದು ಈ ಸುಗ್ರೀವಾಜ್ಞೆಯನ್ನು ನೋಡಿದ ಮೇಲೆ, ಅನ್‌ರೆಕಗ್‌ನೈಸ್ಡ್ ಸ್ಕೂಲ್‌ನವರು ತಮ್ಮ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳಬಾರದಾಗಿತ್ತು. ನಾವು ಸಂಸ್ಥೆಯ ದೃಷ್ಟಿಯಿಂದ ನೋಡುತ್ತಿಲ್ಲ. ವಿದ್ಯಾರ್ಥಿಗಳ ದೃಷ್ಟಿಯಿಂದ ಮಾತ್ರ ನಾವು ನೋಡುತ್ತಿರುವುದು , ಕಾನೂನು ಪ್ರಕಾರ ಅವುಗಳಿದ್ದರೆ ರೆಗ್ಯುಲರೈಸ್ ಮಾಡುತ್ತೇವೆ. ಇಲ್ಲವೆಂದರೆ ಅವುಗಳನ್ನು ಬಂದ್ ಮಾಡುತ್ತೇವೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಇವೊತ್ತು ಅನೇಕ ಅನ್‌ಏಡೆಡ್ ಸ್ಕೂಲ್ಸ್ ಇವೆ. ಒಬ್ಬೊಬ್ಬ ಟೀಚರ್‌ನಿಂದ 50-60 ಸಾವಿರ ಹಣ ತೆಗೆದುಕೊಂಡು ಸರ್ಕಾರದಿಂದ ಗ್ರ್ಯಾಂಟ್ ಬಂದ ಮೇಲೆ ನಿಮಗೆ ಸಂಬಳ ಕೊಡುತ್ತೇವೆಂದು ಹೇಳಿ, ಅವರು ಸ್ಕೂಲ್‌ಗಳನ್ನು ನಡೆಸುತ್ತಿದ್ದಾರೆ. ಅದೂ ಅಲ್ಲದೆ ಅಂಥಾ ಸ್ಕೂಲ್‌ಗಳಲ್ಲಿ ಬೆಂಚುಗಳು ಇರುವುದಿಲ್ಲ, ಛೇರ್ಸ್ ಇರುವುದಿಲ್ಲ, ಕ್ಲಾಸ್ ರೂಮ್ಸ್ ಇರುವುದಿಲ್ಲ. ಇದರ ಬಗ್ಗೆ ತಾವು ಏನಾದರೂ ಪರಿಶೀಲನೆ ಮಾಡಿದ್ದೀರಾ? ಇಂಥ ಇನ್ಸಿಟ್ಯೂಷನ್ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೀರಾ? ಒಬ್ಬೊಬ್ಬ ಲೆಕ್ಚರರ್ ಮತ್ತು ಟೀಚರ್ 50-60 ಸಾವಿರ ಕೊಟ್ಟು ಕೆಲಸಕ್ಕೆ ಸೇರಿಕೊಂಡಿದ್ದಾರೆ, ಇದುವರೆಗೂ ಅವರು ಸಂಬಳ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಏನು ಮಾಡುತ್ತೀರಿ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸಂಬಳದ ಬಗ್ಗೆ ಪ್ರಶ್ನೆಯೇ ಇಲ್ಲ. ಏಕೆಂದರೆ ಅವು ಅನುದಾನ ರಹಿತ ಶಾಲೆಗಳು. ಇನ್ನು ಶಾಲೆಗಳಲ್ಲಿ ಅವ್ಯವಸ್ಥೆ ಇದ್ದು ಅಧ್ಯಾಪಕರು ಕಾನೂನು ಪ್ರಕಾರ ಇರಲಿಲ್ಲವೆಂದರೆ ಅವುಗಳ ಮೇಲೆ ನಾವು ಆಕ್ಷನ್ ತೆಗೆದುಕೊಳ್ಳುತ್ತೇವೆ ಮತ್ತು ಬಂದ್ ಮಾಡುವ ವ್ಯವಸ್ಥೆ ಮಾಡುತ್ತೇವೆ. ಆದರೆ ಅವುಗಳಿಲ್ಲವನ್ನೂ ಸಾರಾಸಗಟಾಗಿ ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ.

Sub : Vacancy of Grade -II Teachers in Minority Institutions.

Strred Qu. No. : 204 (1218)
Sri. K.C. Modagekar Desai (Hegebagevadi) : Will Minister for Education be pleased to state :

a) Number of posts of Grade -II Teachers are vacant in Minority Institutions in the State